ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ57)
ನಮೂನೆ ಸಂಖ್ಯೆ4

ಸಿ ಆರ್ ಪಿ 67

## ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು

CC No.40/2017 CW-9 PW-7

| | | |
|---|---|---|
| ಹೆಸರು | : | ರವಿಪ್ರಭು |
| ತಂದೆಯ/ಗಂಡನ ಹೆಸರು | : | ಉಪೇಂದ್ರ ಪ್ರಭು |
| ವಯಸ್ಸು | : | 35 ವರ್ಷ |
| ಉದ್ಯೋಗ | : | ದಿನಸಿ ವ್ಯಾಪಾರ |
| ವಾಸಸ್ಥಳ | : | ಸಿಂಧನೂರು |

ಸಾಕ್ಷಿಗೆ ಪ್ರಮಾಣ ವಚನ ಬೋದಿಸಿದ ದಿನಾಂಕಃ 03-06-2022

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ

ಅಕ್ಕಮ್ಮ ಎನ್ನುವವರು ನನಗೆ ಸೋದರ ಅತ್ತೆ. ಅವರು ದಿಃ 27-05-2016 ರಂದು ಮೃತಪಟ್ಟಿದ್ದಾರೆ. ಅವರು ನಮ್ಮ ಮನೆಯಲ್ಲಿ ಇದ್ದರು. ಆಕೆಗೆ ಪ್ರತಿತಿಂಗಳು ರೂ.400/- ರಂತೆ ಸಂಧ್ಯಾ ಸುರಕ್ಷಾ ಯೋಜನೆಯಡಿಯಲ್ಲಿ ಮಾಶಾಸನ ಬಹಳ ವರ್ಷಗಳಿಂದ ಬರುತ್ತಿತ್ತು. 2010 ನೇ ಸಾಲಿನ ಜನವರಿಯಿಂದ ನಾಲ್ಕು ತಿಂಗಳ ಮಾಶಾಸನ ಬರಲಿಲ್ಲ. ಈ ಬಗ್ಗೆ ಚಾಸಾ-1 ರವರನ್ನು ವಿಚಾರಿಸಿದೆವು. ಚಾಸಾ-1 ರವರು ನನ್ನ ಅತ್ತೆ ಹೆಬ್ಬೆಟ್ಟಿನ ಗುರುತು ಹಾಕಿ ಮಾಶಾಸನ ತೆಗೆದುಕೊಂಡಿರುತ್ತಾರೆ ಎಂದು ತಿಳಿಸಿದರು. ಆದರೆ ನನ್ನ ಅತ್ತೆ ಆಂಗ್ಲ ಭಾಷೆಯಲ್ಲಿ ಎ.ಎಸ್. ಪ್ರಭು ಎಂದು ಸಹಿ ಮಾಡುತ್ತಿದ್ದರು. ನನ್ನ ಅತ್ತೆಗೆ ಪ್ರತಿ ತಿಂಗಳು ಆರೋಪಿಯು ತಂದು ಕೊಟ್ಟು ಹೋಗುತ್ತಿದ್ದ. ನಂತರ ಆರೋಪಿಯನ್ನು ಕೇಳಲಾಗಿ ಅವನು ಮಾಶಾಸನ ಬಂದಿಲ್ಲ ಎಂದು ನಮಗೆ ತಿಳಿಸಿದ. ನಾವು ಪುನಃ ಚಾಸಾ-1 ರವರನ್ನು ವಿಚಾರಿಸಲಾಗಿ ಆರೋಪಿಯು ಮಾಶಾಸನವನ್ನು ನನ್ನ ಅತ್ತೆಗೆ ನೀಡುವ ಬದಲು ಆತನೇ ಹೆಬ್ಬೆಟ್ಟಿನ ಗುರುತನ್ನು ಹಾಕಿ ತಾನೇ ತೆಗೆದುಕೊಂಡಿದ್ದಾನೆ ಎಂದು ತಿಳಿಸಿದರು. ನಂತರ ಈ ಬಗ್ಗೆ ಪ್ರಕರಣ ದಾಖಲಾಗಿತ್ತು. ನಾನು ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ. ನನ್ನ ಅತ್ತೆಯ ಮಾಶಾಸನವನ್ನು ಪಡೆದುಕೊಂಡ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ನನ್ನ ಅತ್ತೆಯ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಅಕ್ಕಮ್ಮರವರ ಹೇಳಿಕೆಯನ್ನು ಮತ್ತು ಅದರಲ್ಲಿರುವ ಅಕ್ಕಮ್ಮರವರ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು

ನಿಪಿ-**25** ಅದರಲ್ಲಿರುವ ಅಕ್ಕಮ್ಮರವರ ಸಹಿಯನ್ನು ನಿಪಿ-**25** ಎ ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>

ಶ್ರೀ ಎಮ್.ಜಿ. ವಕೀಲರು ಅವರ ಹಿರಿಯ ವಕೀಲರು ಇಲ್ಲ, ಆ ಕಾರಣಕ್ಕಾಗಿ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಅದು ಸಕಾರಣವಲ್ಲದ ಕಾರಣ ಅವರ ಕೋರಿಕೆಯನ್ನು ತಿರಸ್ಕರಿಸಿ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.